# ಪುಟ್ಟನ ಪ್ರಶ್ನೆ

■ ಸಿದ್ದಲಿಂಗಪ್ಪ ಬೀಳಗಿ, ಹುನಗುಂದ
ಕಲೆ: ಸಂತೋಷ ಸಸಿಹಿತ್ಲು

ಮುಗಿಲಲಿ ಇರುವ
ಸೂರ್ಯ ಚಂದ್ರರು
ಕೆಳಗಡೆ ಏಕೆ ಬೀಳಲ್ಲ?

ಜೀವಿಗೆ ಉಸಿರನು
ನೀಡುವ ಗಾಳಿಯು
ಕಣ್ಣಿಗೆ ಏಕೆ ಕಾಣಲ್ಲ?

ನೀರಲಿ ಇರುವ
ಮೀನಿಗೆ ಈಜನು
ಕಲಿಸುವರಾರು?

ಅಪ್ಪನಿಗಿರುವ
ದಪ್ಪನೆ ಮೀಸೆ
ಅವ್ವನಿಗೇಕಿಲ್ಲ?

ಬೌ ಬೌ ನಾಯಿಯ
ಬಾಲವು ನೆಟ್ಟಗೆ
ಯಾಕೆ ಆಗಲ್ಲ?

ಕಣ್ಮನ ಸೆಳೆಯುವ
ಕಾಮನಬಿಲ್ಲದು ಮುಗಿಲಲಿ
ಹೇಗೆ ಮೂಡುವುದು?

ದಪ್ಪನೆ ಸಿಪ್ಪೆಯ
ಕಬ್ಬಲಿ ಸಿಹಿಯನು
ತುಂಬಿದ್ದು ಯಾರು?

ಹಸಿರು ಬಣ್ಣದ
ಗಿಳಿಗಳ ತುಟಿಗೆ
ಲಿಪ್‌ಸ್ಟಿಕನ್ನು ಹಚ್ಚಿದ್ರಾರು?

ನೀಲಿ ಬಣ್ಣದ
ಸಮುದ್ರದ ನೀರದು
ಏಕೆ ಉಪ್ಪುಪ್ಪು?




## ಕುಂಚ ಪ್ರಪಂಚ



**ಶ್ರೀಗೌರಿ ನಾಡಿಗ್**
6ನೇ ತರಗತಿ,
ವಿಕಾಸ ಶಾಲೆ, ಶಿವಮೊಗ್ಗ







**ಅಮೃತಾ ಸೂರಜ್ ಪೈ**
4ನೇ ತರಗತಿ,
ಮಾಧವ್ ಕೃಪಾ ಸ್ಕೂಲ್,
ಮಣಿಪಾಲ್

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in